# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

---

ದಿನಾಂಕ: **30–06–2023** ರಂದು ಬೆಳಿಗ್ಗೆ **10:00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ **27**ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ನಡಾವಳಿ.

| ಉಪಸ್ಥಿತ ಶೈಕ್ಷಣಿಕ ಮಂಡಳಿ ಸದಸ್ಯರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. |
| **ಪ್ರೊ. ಎನ್. ಲಕ್ಷ್ಮಿ**<br>ಡೀನ್ (ಶೈಕ್ಷಣಿಕ),<br>ಮತ್ತು ಸ್ಕೂಲ್ ನಿರ್ದೇಶಕರು, ಶಿಕ್ಷಣ ನಿಕಾಯ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು |
| **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | **ಪ್ರೊ. ಎಂ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು),<br>ಮತ್ತು ಸ್ಕೂಲ್ ನಿರ್ದೇಶಕರು, ಭಾಷಾ ನಿಕಾಯ<br>ಕರಾಮುವಿ, ಮೈಸೂರು. |
| **ಸ್ಕೂಲ್ ನಿರ್ದೇಶಕರು** | |
| | |
| **ಪ್ರೊ. ಕಾಂಬ್ಳೆ ಅಶೋಕ್** | ವಿಜ್ಞಾನ ನಿಕಾಯ |
| **ಪ್ರೊ. ಸಿ. ಮಹದೇವಮೂರ್ತಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ರಮಾನಂದ ಎಂ. ಎಸ್** | ವಾಣಿಜ್ಯ ನಿಕಾಯ |
| **ಡಾ. ಶಂಕರನಾರಣಪ್ಪ** | ಸಮಾಜ ವಿಜ್ಞಾನ ನಿಕಾಯ |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್. ಎಸ್**<br>ನಿರ್ದೇಶಕರು, CIQA, ಕರಾಮುವಿ, ಮೈಸೂರು. | **ಡಾ. ಮಹೇಶ ವಿ**<br>ನಿರ್ದೇಶಕರು, PMEB, ಕರಾಮುವಿ, ಮೈಸೂರು. |
| **ಡಾ. ಹೆಚ್. ರಾಜೇಶ್ವರಿ**<br>ನಿರ್ದೇಶಕರು, R&D CELL,<br>ಕರಾಮುವಿ, ಮೈಸೂರು. | |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರ ಸೂಚನೆಯಂತೆ ಡೀನ್ (ಶೈಕ್ಷಣಿಕ) ರವರು ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಹೊಸದಾಗಿ ನೇಕಗೊಂಡಿರುವ ಸ್ಕೂಲ್ ನಿರ್ದೇಶಕರುಗಳನ್ನು 27ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ನಂತರ ಕಾರ್ಯಸೂಚಿಯಂತೆ ವಿಷಯಗಳನ್ನು ಸಭೆಗೆ ಮಂಡಿಸಲಾಯಿತು.

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 27.01**

ವಿಷಯ: ವಿಶ್ವವಿದ್ಯಾನಿಲಯದಲ್ಲಿ 2018-19, 2019-20ನೇ ಜುಲೈ ಮತ್ತು ಜನವರಿ ಆವೃತ್ತಿ, 2020-21ನೇ ಜುಲೈ ಮತ್ತು ಜನವರಿ ಆವೃತ್ತಿ, ಶೈಕ್ಷಣಿಕ ಸಾಲುಗಳಲ್ಲಿ ವಿವಿಧ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಸೆಪ್ಟಂಬರ್/ಅಕ್ಟೋಬರ್-2022ರವರೆಗೆ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ:02-07-2023 ರಂದು ನಡೆಸಲು ವಿದ್ಯಾರ್ಥಿಗಳ ಅರ್ಹತಾ ಪಟ್ಟಿಯನ್ನು ಅನುಮೋದಿಸುವ ಬಗೆಗೆ.

*****

ಅಧಿಸೂಚನೆ ಸಂಖ್ಯೆ:ಕರಾಮುವಿ/ಪವಿ/ಘವಿ/501/2023-24 ದಿನಾಂಕ: 20-05-2023 ರ ಅಧಿಸೂಚನೆ ಪ್ರಕಾರ 18ನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ: 02-07-2023 ರಂದು ನಡೆಸಲಿದ್ದು ಈ ಘಟಿಕೋತ್ಸವದಲ್ಲಿ 2018-19 ಮತ್ತು 2019-20 ನೇ ಜುಲೈ ಮತ್ತು ಜನವರಿ ಆವೃತ್ತಿ, 2020-21ನೇ ಜುಲೈ ಮತ್ತು ಜನವರಿ ಆವೃತ್ತಿ ಶೈಕ್ಷಣಿಕ ಸಾಲುಗಳಲ್ಲಿ ವಿವಿಧ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಸೆಪ್ಟಂಬರ್/ ಅಕ್ಟೋಬರ್ – 2022ರ ವರೆಗೆ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ನೀಡಬೇಕಾಗಿರುತ್ತದೆ.

2018-19ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ಎಂಎಸ್ಸಿ ಮನೋವಿಜ್ಞಾನದ ಕಾರ್ಯಕ್ರಮದಲ್ಲಿ ಉತ್ತೀರ್ಣರಾದ 32 ವಿದ್ಯಾರ್ಥಿಗಳು, 2019-20ನೇ (ಜುಲೈ ಆವೃತ್ತಿ) ಸಾಲಿನಲ್ಲಿ ಪ್ರವೇಶಾತಿ ಪಡೆದ ಬಿ.ಎ, ಬಿ.ಕಾಂ, ಎಂ.ಬಿ.ಎ ಮತ್ತು ಎಲ್ಲಾ ಎಂ.ಎಸ್ಸಿ (ಮನೋವಿಜ್ಞಾನದ ವಿಷಯವನ್ನು ಹೊರತು ಪಡಿಸಿ) ಕಾರ್ಯಕ್ರಮದಲ್ಲಿ ಉತ್ತೀರ್ಣರಾದ 1931 ವಿದ್ಯಾರ್ಥಿಗಳು, 2019-20 (ಜನವರಿ ಆವೃತ್ತಿ) ಬಿ.ಎಡ್, ಬಿ.ಲಿಬ್.ಐ.ಎಸ್ಸಿ, ಎಂ.ಲಿಬ್.ಐ.ಎಸ್ಸಿ, ಎಂ.ಬಿ.ಎ ಮತ್ತು ಎಲ್ಲಾ ಎಂ.ಎ, ಎಂ.ಕಾಂ, ಎಂ.ಎಸ್ಸಿ,(ಮನೋವಿಜ್ಞಾನದ ವಿಷಯವನ್ನು ಹೊರತು ಪಡಿಸಿ) ಕಾರ್ಯಕ್ರಮದಲ್ಲಿ ಉತ್ತೀರ್ಣರಾದ 1657 ವಿದ್ಯಾರ್ಥಿಗಳು, 2020-21ನೇ (ಜುಲೈ ಆವೃತ್ತಿ) ಸಾಲಿನಲ್ಲಿ ಪ್ರವೇಶಾತಿ ಪಡೆದ ಬಿ.ಲಿಬ್.ಐ.ಎಸ್ಸಿ, ಎಂ.ಲಿಬ್.ಐ.ಎಸ್ಸಿ, ಮತ್ತು ಎಂ.ಎ, ಎಂ.ಕಾಂ ಕಾರ್ಯಕ್ರಮದಲ್ಲಿ ಉತ್ತೀರ್ಣರಾದ 5018 ವಿದ್ಯಾರ್ಥಿಗಳು, 2020-21 (ಜನವರಿ ಆವೃತ್ತಿ) ಬಿ.ಲಿಬ್.ಐ.ಎಸ್ಸಿ, ಎಂ.ಲಿಬ್.ಐ.ಎಸ್ಸಿ, ಕಾರ್ಯಕ್ರಮದಲ್ಲಿ ಉತ್ತೀರ್ಣರಾದ 83 ವಿದ್ಯಾರ್ಥಿಗಳು. ಒಟ್ಟು 8,721 ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ. ಇವರುಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಹಾಗೂ 44 ಚಿನ್ನದ ಪದಕ, 27 ನಗದು ಬಹುಮಾನ ವಿಜೇತರು ಹಾಗೂ 01 ಪಿ.ಹೆಚ್.ಡಿ ವಿದ್ಯಾರ್ಥಿಗಳನ್ನು ವೇದಿಕೆಗೆ ಅಹ್ವಾನಿಸಿ ಪದವಿ/ ಪದಕ/ ನಗದು ಬಹುಮಾನಗಳನ್ನು ವಿತರಿಸಬೇಕಾಗಿರುವ ಪ್ರಸ್ತಾವನೆಯನ್ನು ದಿನಾಂಕ:02-07-2023ರಂದು ನಡೆಯಲಿರುವ 29ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : ವಿಶ್ವವಿದ್ಯಾನಿಲಯದಲ್ಲಿ 2018-19, 2019-20ನೇ ಜುಲೈ ಮತ್ತು ಜನವರಿ ಆವೃತ್ತಿ, 2020-21ನೇ ಜುಲೈ ಮತ್ತು ಜನವರಿ ಆವೃತ್ತಿ, ಶೈಕ್ಷಣಿಕ ಸಾಲುಗಳಲ್ಲಿ ವಿವಿಧ ಶಿಕ್ಷಣ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಸೆಪ್ಟಂಬರ್/ಅಕ್ಟೋಬರ್-2022ರವರೆಗೆ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ:02-07-2023 ರಂದು ನಡೆಸಲು ವಿದ್ಯಾರ್ಥಿಗಳ ಅರ್ಹತಾ ಪಟ್ಟಿಯನ್ನು ಅನುಮೋದಿಸಲಾಯಿತು.

---

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ: 27.02

ವಿಷಯ: ಶ್ರೀಮತಿ. ಭಾಗ್ಯಶ್ರೀ ಎನ್ ರವರ ಮಾಹಿತಿಯನ್ನು 18ನೇ ವಾರ್ಷಿಕ ಘಟಿಕೋತ್ಸವದ ಅರ್ಹತಾ ಪಟ್ಟಿಯಲ್ಲಿ ಸೇರಿಸಿಕೊಂಡು ಪದವಿ ಪ್ರಧಾನ ಮಾಡುವ ಬಗೆಗೆ.

*****

18ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ವಿತರಿಸಲು 18ನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ: 02-07-2023 ರಂದು ನಡೆಸಲಾಗುತ್ತಿದೆ. ಈ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಸೆಪ್ಟೆಂಬರ್ / ಅಕ್ಟೋಬರ್-2022ರ ವರೆಗೆ ಉತ್ತೀರ್ಣರಾದ ಎಲ್ಲಾ ಯು.ಜಿ / ಪಿ.ಜಿ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ದಿನಾಂಕ: 20.05.2023 ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಎಲ್ಲಾ ಕಾರ್ಯವನ್ನು ಪೂರ್ಣಗೊಳಿಸಲಾಗಿರುತ್ತದೆ.

ಮುಂದುವರೆದು, ಎಂ.ಎ ರಾಜ್ಯ ಶಾಸ್ತ್ರ ವಿಭಾಗದಲ್ಲಿ ಶ್ರೀಮತಿ ಭಾಗ್ಯಶ್ರೀ ಎನ್ ನೋಂದಣಿ ಸಂಖ್ಯೆ: 07151 ರವರಿಗೆ ದಿನಾಂಕ: 27.06.2023 ರಂದು ಪಿ.ಹೆಚ್‌ಡಿ ಪ್ರಧಾನ ಮಾಡಲು ಅಧಿಸೂಚನೆ ಹೊರಡಿಸಲಾಗಿರುತ್ತದೆ. 18ನೇ ವಾರ್ಷಿಕ ಘಟಿಕೋತ್ಸವದಲ್ಲಿ ಯಾವುದೇ ಪಿ.ಹೆಚ್‌ಡಿ ಅಭ್ಯರ್ಥಿಗಳು ಇಲ್ಲದ ಕಾರಣ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಶ್ರೀಮತಿ ಭಾಗ್ಯಶ್ರೀ ಎನ್ ರವರಿಗೆ ಪಿ.ಹೆಚ್‌ಡಿ ವಿಷಯವನ್ನು ಅರ್ಹತಾಪಟ್ಟಿಯಲ್ಲಿ ಸೇರಿಸಿಕೊಂಡು ಪದವಿ ಪ್ರಮಾಣ ಪತ್ರ ವಿತರಿಸಲು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಶ್ರೀಮತಿ. ಭಾಗ್ಯಶ್ರೀ ಎನ್ ರವರ ಮಾಹಿತಿಯನ್ನು 18ನೇ ವಾರ್ಷಿಕ ಘಟಿಕೋತ್ಸವದ ಅರ್ಹತಾ ಪಟ್ಟಿಯಲ್ಲಿ ಸೇರಿಸಿಕೊಂಡು ಪದವಿ ಪ್ರಧಾನ ಮಾಡುವ ಬಗ್ಗೆ ಅನುಮೋದಿಸಲಾಯಿತು.**

---

ವಿಷಯ ಸಂಖ್ಯೆ: 27.03:

ವಿಷಯ: ವಾರ್ಷಿಕ ಘಟಿಕೋತ್ಸವ ಪರಿನಿಯಮ 2000 (III) ರಲ್ಲಿ ತಿದ್ದುಪಡಿಯಾಗಿರುವಂತೆ ಈ ಹಿಂದಿನ ಘಟಿಕೋತ್ಸವದ ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಳ್ಳದ ಅಭ್ಯರ್ಥಿಗಳ ಪಟ್ಟಿಯನ್ನು ಸೇರಿಸಿಕೊಳ್ಳುವ ಬಗೆಗೆ.

*****

ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವ ಪರಿನಿಯಮ 2000(III) ರಲ್ಲಿನ ತಿದ್ದುಪಡಿಯಾಗಿರುವಂತೆ ಈ ಹಿಂದಿನ ಘಟಿಕೋತ್ಸವ ಸಮಾರಂಭಧ ಅರ್ಹತಾ ಪಟ್ಟಿಯಲ್ಲಿ ಸೆರ್ಪಡೆಗೊಳ್ಳದ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ದಿನಾಂಕ: 02..07.2023 ರಂದು ನಡೆಯುವ ವಾರ್ಷಿಕ ಘಟಿಕೋತ್ಸವದ ಅರ್ಹತಾ ಪಟ್ಟಿಯಲ್ಲಿ ಸೇರಿಸಿಕೊಳ್ಳಲು ವಿಶ್ವವಿದ್ಯಾನಿಲಯದ ಪರಿನಿಯಮದಂತೆ ಕ್ರಮ ವಹಿಸುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ವಾರ್ಷಿಕ ಘಟಿಕೋತ್ಸವ ಪರಿನಿಯಮ 2000 (III) ರಲ್ಲಿ ತಿದ್ದುಪಡಿಯಾಗಿರುವಂತೆ ಈ ಹಿಂದಿನ ಘಟಿಕೋತ್ಸವದ ಅರ್ಹತಾ ಪಟ್ಟಿಯಲ್ಲಿ ಸೇರ್ಪಡೆಗೊಳ್ಳದ ಅಭ್ಯರ್ಥಿಗಳ ಪಟ್ಟಿಯನ್ನು ಸೇರಿಸಿಕೊಳ್ಳುವ ಬಗ್ಗೆ ಅನುಮೋದಿಸಲಾಯಿತು**

---

ಕುಲಸಚಿವರು

ಕುಲಪತಿಗಳು

ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿತವಾದ ವಿಷಯಗಳು

ವಿಷಯ ಸಂಖ್ಯೆ: 27.04:

ವಿಷಯ: ವಿಶ್ವವಿದ್ಯಾನಿಲಯವು ಹೊಸದಾಗಿ ಆನ್‌ಲೈನ್ ಮುಖಾಂತರ ಪ್ರಾರಂಭಿಸಲು ಉದ್ದೇಶಿಸಿರುವ ಆನ್‌ಲೈನ್ ಪಿ.ಪಿ.ಆರ್. ಗಳನ್ನು ಅನುಮೋದಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಇತ್ತೀಚಿಗೆ ನ್ಯಾಕ್ ನಿಂದ A+ ಗ್ರೇಡ್ ಅನ್ನು ಪಡೆದುಕೊಂಡು ಆನ್‌ಲೈನ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅರ್ಹತೆ ಪಡೆದಿರುವ ಹಿನ್ನೆಲೆಯಲ್ಲಿ 2023-24ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಕೆಳಕಂಡ 13 ವಿವಿಧ ಕಾರ್ಯಕ್ರಮಗಳನ್ನು ಆನ್‌ಲೈನ್ ಮುಖೇನ ಪ್ರಾರಂಭಿಸಲು UGC-DEB ಗೆ ಮಾನ್ಯತೆ ಪಡೆಯುವ ಸಂಬಂಧ ಅರ್ಜಿ ಶುಲ್ಕವಾಗಿ ಪ್ರತಿ ಕೋರ್ಸ್‌ಗೆ ರೂ.15,000/-ಗಳಂತೆ ಒಟ್ಟು **ರೂ.1,95,000/-** ಹಾಗೂ ರೂ.35,100/- ತೆರಿಗೆ ಮೊತ್ತ ಸೇರಿದಂತೆ **ಒಟ್ಟಾರೆ ರೂ.2,30,100/- (ರೂ. ಎರಡು ಲಕ್ಷದ ಮೂವತ್ತು ಸಾವಿರ ಮಾತ್ರ)**ಗಳನ್ನು ಆನ್‌ಲೈನ್ ಮೂಲಕ ಭರಿಸಲಾಗಿರುತ್ತದೆ.

| Sl. No | Name of the Programme |
|---|---|
| 1 | B.A |
| 2 | M.Sc - Mathematics |
| 3 | M.Sc – Computer Science |
| 4 | M.Sc – Information Technology |
| 5 | M.A - Economics |
| 6 | M.A - Sanskrit |
| 7 | M.A - Hindi |
| 8 | M.A - English |
| 9 | M.A - Kannada |
| 10 | M.B.A |
| 11 | M.Com |
| 12 | B.Sc – Information Technology |
| 13 | B.Com |

ಈ 13 ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪಿ.ಪಿ.ಆರ್, 4-Quadrant Study Material, ವೀಡಿಯೋಗಳನ್ನು ಸಂಬಂಧಪಟ್ಟ ಅಧ್ಯಯನ ವಿಭಾಗಗಳು ವಿಭಾಗೀಯ ಮಟ್ಟದ ಸಭೆಗಳಲ್ಲಿ ಹಾಗೂ ಸಂಬಂಧಪಟ್ಟ ಬಿ.ಓ.ಎಸ್. ಗಳಲ್ಲಿ ಅನುಮೋದನೆ ಪಡೆದು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ ಸಲ್ಲಿಸಿದ್ದು, ಸದರಿ ವಿಷಯದ ಬಗ್ಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ತೀರ್ಮಾನ : ವಿಶ್ವವಿದ್ಯಾನಿಲಯವು ಹೊಸದಾಗಿ ಆನ್‌ಲೈನ್ ಮುಖಾಂತರ ಪ್ರಾರಂಭಿಸಲು ಉದ್ದೇಶಿಸಿರುವ ಮೇಲ್ಕಂಡ 13 ಶೈಕ್ಷಣಿಕ ಕಾರ್ಯಕ್ರಮಗಳ ಆನ್‌ಲೈನ್ ಪಿ.ಪಿ.ಆರ್, 4-Quadrant Study Material, ವೀಡಿಯೋಗಳನ್ನು ಗಳನ್ನು ಅನುಮೋದಿಸಲಾಯಿತು**

---

ಕುಲಸಚಿವರು

ಕುಲಪತಿಗಳು

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ದಿನಾಂಕ: 02.07.2023 ರಂದು ನಡೆಯುವ ವಿಶ್ವವಿದ್ಯಾನಿಲಯದ 18ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಂದು ಎಲ್ಲಾ ಶೈಕ್ಷಣಿಕ ಮಂಡಳಿ ಸದಸ್ಯರು ಒಂದು ಗಂಟೆ ಮುಂಚಿತವಾಗಿ ಹಾಜರಿದ್ದು ಸಮಾರಂಭವನ್ನು ಯಶಸ್ವಿಯಾಗಿ ನಡೆಸಿಕೊಡಲು ಸಹಕರಿಸುವಂತ ಕೋರಿದರು.

ಅಂತಿಮವಾಗಿ 27ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಕುಲಸಚಿವ (ಪರೀಕ್ಷಾಂಗ) ರವರು ವಂದನಾರ್ಪಣೆಯನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು